

# ಪ್ರಿಯಾಂಕಾ ವಿಡಿಯೊ

ಬಹುತೇಕ ಬಾಲಿವುಡ್ ನಟ ನಟಿಯರು ಕೊರೊನಾ ವೈರಾಣು ವಿರುದ್ಧ ಜಗತ್ತು ಸಾರಿರುವ ಯುದ್ಧದಲ್ಲಿ ಒಂದಲ್ಲ ಒಂದು ವಿಧದಲ್ಲಿ ಭಾಗವಹಿಸುತ್ತಿದ್ದಾರೆ. ಬಾಲಿವುಡ್‌ನಿಂದ ಹಾಲಿವುಡ್‌ವರೆಗೆ ಕೀರ್ತಿ ಹಬ್ಬಿಸಿಕೊಂಡಿರುವ ಪ್ರಿಯಾಂಕಾ ಚೋಪ್ರಾ ಕೂಡಾ ಇದಕ್ಕೆ ಹೊರತಲ್ಲ. ಜನರಲ್ಲಿ ಕೈತೊಳೆಯುವ ಬಗ್ಗೆ ಎಚ್ಚರ ಮೂಡಿಸಲು ನಡೆದಿರುವ ‘ಸೇಫ್ ಹ್ಯಾಂಡ್ ಚಾಲೆಂಜ್‘ ಜಿಂಗಲ್‌ನಲ್ಲಿ ಈಗ ಪ್ರಿಯಾಂಕಾ ಕೂಡಾ ಸೇರಿಕೊಂಡಿದ್ದಾಳೆ. ಅಮೆರಿಕದಲ್ಲಿ ಬಹುತೇಕ ಸೆಲೆಬ್ರಿಟಿಗಳು ಈ ಚಾಲೆಂಜ್‌ನಲ್ಲಿ ಭಾಗವಹಿಸಿದ್ದು ತಾವು ಕೈತೊಳೆಯುವ ವಿಡಿಯೊ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಪ್ರಿಯಾಂಕಾ ಕೂಡಾ ಮನೆಯಲ್ಲಿ ಸೋಪು ಹಾಕಿ ಕೈತೊಳೆಯುವ ವಿಡಿಯೊ ಹಂಚಿಕೊಂಡಿದ್ದಾಳೆ.

ಆದರೆ ಹೀಗೆ ಕೈ ತೊಳೆಯುವಾಗ ತನ್ನ ಸುಮಧುರ ಕಂಠದಿಂದ ಹಾಡೊಂದನ್ನು ಹಾಡುತ್ತಾ ಸಣ್ಣದಾಗಿ ಹೆಜ್ಜೆಗಳನ್ನೂ ಕುಣಿಸಿದ್ದಾಳೆ. ‘ವೆನ್ ಯು ಆರ್ ಹ್ಯಾಪಿ ಆಂಡ್ ಯು ನೋ ಇಟ್, ಕ್ಲಾಪ್ ಯುವರ್ ಹ್ಯಾಂಡ್ಸ್’ ಹಾಡಿನ ಧಾಟಿಯಲ್ಲೇ ಈಕೆಯ ಹಾಡು ‘ವೆನ್ ಯುಆರ್ ವಾಷ್ ಯುವರ್ ಹ್ಯಾಂಡ್...' ಮೂಡಿಬಂದಿದೆ. ‘ನಾನೂ ಸೇಫ್ ಹ್ಯಾಂಡ್ ಚಾಲೆಂಜ್‌ನಲ್ಲಿ ಭಾಗವಹಿಸಿದ್ದೇನೆ. ಕೇವಲ 20 25 ಸೆಕೆಂಡ್‌ಗಳಲ್ಲಿ ಕೈಯನ್ನು ಚೆನ್ನಾಗಿ ತೊಳೆಯಬಹುದು. ಸೋಂಕು ಹರಡದಂತೆ ಎಚ್ಚರ ವಹಿಸಿ’ ಎನ್ನುವುದು ಆಕೆಯ ಕಿವಿಮಾತು. ಅಂದ ಹಾಗೆ ಜಗತ್ತಿನ ಎಲ್ಲೆಡೆ ವೈರಲ್ ಆಗಿರುವ ಈ ಹಾಡಿನ ಸಾಹಿತ್ಯ ಆಕೆಯ ಗಂಡ ನಿಕ್ ಜೊನಾಸ್‌ನದ್ದು. ಅದೂ ಆಕೆಗೆ ಖುಷಿ ತಂದಿರುವ ವಿಷಯವಂತೆ. ಪ್ರಿಯಾಂಕಾ ಗಾಯಕಿ ಆಗಿಯೂ ಈಗಾಗಲೇ ಹೆಸರು ಮಾಡಿರುವುದರಿಂದ ಸಿನಿಪ್ರೇಕ್ಷಕರು ಆಕೆಯ ಚಾಲೆಂಜ್ ವಿಡಿಯೊವನ್ನು ದೊಡ್ಡ ಸಂಖ್ಯೆಯಲ್ಲಿ ವೀಕ್ಷಿಸುತ್ತಿದ್ದಾರೆ. ■

# ಹಳೆ ಪತ್ನಿಯ ಪಾದ?

ಹಾಲಿವುಡ್‌ನ ಸಾರ್ವಕಾಲಿಕ ಶ್ರೇಷ್ಠ ನಟಿ ಆಂಜೆಲಿನಾ ಜೋಲಿಯನ್ನು ತೊರೆದ ಬಳಿಕ ಸೂಪರ್‌ಸ್ಟಾರ್ ಬ್ರಾಡ್‌ಪಿಟ್ ಏನು ಮಾಡುತ್ತಿದ್ದಾನೆ ಎನ್ನುವ ಪ್ರಶ್ನೆಗೆ ಈಗ ಉತ್ತರ ಸಿಕ್ಕಿದೆ. ಆತ ತನ್ನ ಮಾಜಿ ಪತ್ನಿ ಜೆನಿಫರ್ ಆನಿಸ್ಟನ್ ಜೊತೆಗೆ ಮತ್ತೆ ಕೂಡಿಕೊಂಡಿದ್ದಾನಂತೆ. ಬ್ರಾಡ್‌ಪಿಟ್‌ನ ಜೊತೆಗೂಡಿ ಬಾಡಿಗೆ ತಾಯಿಯಾಗಲೂ ಜೆನಿಫರ್ ನಿರ್ಧರಿಸಿದ್ದಾಳಂತೆ.

ಬ್ರಾಡ್ ಪಿಟ್ ಮತ್ತು ಜೆನಿಫರ್ ಆನಿಸ್ಟನ್ ಸ್ನೇಹ ಬಹಳ ಹಳೆಯದ್ದು. ಅವರು ಮೊದಲ ಬಾರಿ ಭೇಟಿಯಾದದ್ದು 1994ರಲ್ಲಿ. ಆ ಕಾಲದ ಜನಪ್ರಿಯ ಧಾರಾವಾಹಿ ಸಿಟ್‌ಕಾಮ್ ಫ್ರೆಂಡ್ಸ್ ಶೂಟಿಂಗ್‌ನಲ್ಲಿ. ಜೆನಿಫರ್ ನಿರ್ವಹಿಸಿದ ರಾಚೆಲ್ ಗ್ರೀನ್ ಪಾತ್ರ ಆಕೆಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿತ್ತು. ಫ್ರೆಂಡ್ಸ್‌ನ ಒಂದು ಎಪಿಸೋಡ್‌ನಲ್ಲಿ ಬ್ರಾಡ್‌ಪಿಟ್ ಅತಿಥಿ ನಟನಾಗಿ ಕಾಣಿಸಿಕೊಂಡಿದ್ದ. 1998ರಿಂದ ಇಬ್ಬರೂ ಡೇಟಿಂಗ್ ಶುರು ಮಾಡಿ, 2000ದಲ್ಲಿ ಮದುವೆಯೂ ಆದರು. ಮಲಿಬುನಲ್ಲಿ ನಡೆದ ಈ ಐಶಾರಾಮಿ ಮದುವೆಯಲ್ಲಿ ಜಗತ್ತಿನಾದ್ಯಂತ ಸೆಲೆಬ್ರಿಟಿ ಅನ್ನಿಸಿಕೊಂಡಿದ್ದ 200 ಅತಿಥಿಗಳು ಭಾಗವಹಿಸಿದ್ದು ದೊಡ್ಡ ಸುದ್ದಿಯಾಗಿತ್ತು.

ಆದರೆ ಇವರಿಬ್ಬರ ಮದುವೆ ಹೆಚ್ಚು ಕಾಲ ಬಾಳಿಕೆ ಬರಲಿಲ್ಲ. 2005ರಲ್ಲಿ ಇಬ್ಬರೂ ವಿಚ್ಛೇದನ ಪಡೆದರು. ಬ್ರಾಡ್‌ಪಿಟ್, ಆಂಜೆಲಿನಾ ಜೋಲಿಯನ್ನು ಮದುವೆಯಾದ. ಬ್ರಾಡ್‌ಪಿಟ್ ಮತ್ತು ಜೋಲಿಗೆ ಆರು ಮಕ್ಕಳು! ಆದರೆ ಆ ಮದುವೆಯನ್ನೂ ಮುರಿದುಕೊಂಡ ಬ್ರಾಡ್ ಪಿಟ್ ಏಕಾಂಗಿಯಾಗಿದ್ದ. ಇತ್ತೀಚೆಗೆ ಪ್ರಶಸ್ತಿ ಸಮಾರಂಭವೊಂದರಲ್ಲಿ ಮಾಜಿ ಪತ್ನಿ ಜೆನಿಫರ್‌ಳನ್ನು ಭೇಟಿಯಾದ ಬಳಿಕ ಇಬ್ಬರ ಮಧ್ಯೆ ಮತ್ತೆ ಪ್ರೇಮ ಚಿಗುರಿತಂತೆ. ಈ ಹಿಂದೆ ಮಾಡಿಕೊಂಡಂತೆಯೇ ಈ ಸಲವೂ ಭರ್ಜರಿ ಸಮಾರಂಭದಲ್ಲಿ ಸಮುದ್ರ ತೀರದಲ್ಲಿ ಮದುವೆ ಮಾಡಿಕೊಳ್ಳಲೂ ಇವರು ನಿರ್ಧರಿಸಿದ್ದಾರಂತೆ.

ಆದರೆ ಈ ಸುದ್ದಿಯನ್ನು ಪಿಟ್‌ನ ನಿಕಟವರ್ತಿಗಳು ನಿರಾಕರಿಸಿದ ಸುದ್ದಿಯೂ ಬಂದಿದೆ. ‘ಇಬ್ಬರೂ ಗೆಳೆಯರಷ್ಟೇ. ಮದುವೆ, ಬಾಡಿಗೆ ತಾಯಿಯ ಎಲ್ಲ ಸುದ್ದಿಗಳೂ ಸುಳ್ಳು’ ಎನ್ನುತ್ತಿದ್ದಾರೆ ಬ್ರಾಡ್‌ನ ಗೆಳೆಯರು. ■

